ಮಂಗಳೂರು ತೈಲಾಗಾರ ಸ್ಥಾಪಿಸಲು ಧನ ಸಹಾಯ ನೀಡುವ ಬಗ್ಗೆ

೧೦೬. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದ ಯೋಜನೆಯಲ್ಲಿ ಮಂಗಳೂರು ಶೈತ್ಯಾಗಾರದ ಬಗ್ಗೆ ಪ್ರಾಶಸ್ತ್ಯ ನೀಡಿ ಹಣ ಒದಗಿಸಲಾಗಿದೆಯೆ,

(ಆ) ಕೇಂದ್ರ ಸರ್ಕಾರದವರು ಈ ತೈಲ ಶುದ್ಧೀಕರಣ ಆಗಾರವನ್ನು ಸ್ಥಾಪಿಸಲು ಹಣ ಸಹಾಯ ನೀಡಲು ಒಪ್ಪಿದ್ದಾರೆಯೆ,

(ಇ) ಹಾಗಿದ್ದಲ್ಲಿ ಇದರ ವಿವರಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಮಂಗಳೂರಿನಲ್ಲಿ ತೈಲಾಗಾರವೊಂದನ್ನು ಸ್ಥಾಪಿಸುವು ವಿಷಯವು ಕೇಂದ್ರ ಸರ್ಕಾರದ ಗಮನದಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—(ಅ) ಪ್ರಶ್ನೆಗೆ ''ಇಲ್ಲ'' ಎಂದೂ ಉತ್ತರ ಕೊಟ್ಟಿದ್ದೇನೆ ಇನ್ನು ಕೇಂದ್ರ ಸರ್ಕಾರದವರು ಈ ತೈಲ ಶುದ್ಧೀಕರಣಗಾರವನ್ನು ಸ್ಥಾಪಿಸಲೂ ಹಣಸಹಾಯ ನೀಡಲು ಒಪ್ಪಿದ್ದಾರೆಯೇ, ಎಂದು ಕೇಳಿದ್ದೀರಿ. ಇದು ನಮ್ಮ ಗಮನದಲ್ಲಿದೆ. ಹಣವನ್ನು ಕೇಳಿದ್ದೇವೆ. ಈ ಬಗ್ಗೆ ೧೯೮೦ ರಿಂದ ಈ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಆಸಕ್ತಿ ವಹಿಸಿದೆ. ಕೇಂದ್ರದವರು ಕೇಳುವ ಎಲ್ಲಾ ವ್ಯವಸ್ಥೆಯನ್ನೂ ಒದಗಿಸುವ ನಿರ್ಣಯವನ್ನು ರಾಜ್ಯಸರ್ಕಾರ ತೆಗೆದುಕೊಂಡಿದೆ ಇದಕ್ಕೆ ಬೇಕಾದಂಥ ೧೫ ನೂರು ಎಕರೆ ಜಮೀನನ್ನು ಮಂಗಳೂರಿನ ಬಳಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಪ್ರಧಾನಮಂತ್ರಿಗಳನ್ನು ಭೇಟಿಮಾಡಿ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅಲ್ಲದೆ ತಾರೀಖು ೨೭ನೇ ಜನವರಿ ೧೯೮೩ರಲ್ಲಿ ಒಂದು ಪತ್ರವನ್ನೂ ಬರೆದು ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲನೇ ಪ್ರಶ್ನೆಗೆ ''ಇಲ್ಲ'' ಎಂದು ತಾವು ಉತ್ತರ ಕೊಟ್ಟಿದ್ದೀರಿ, ಇದು ಬಹುಶಃ ತಪ್ಪಾಗಿರಬಹುದು. ಏಕೆಂದರೆ ಇಲ್ಲಿ ಕೋಲ್ಡ್ ಸ್ಟೋರೇಜ್ ಎಂದು ಇದೆ, ಆದರೆ ಇದು ತೈಲಾಗಾರ ಎಂದು, ಇರಬೇಕು. ನಾನು ಬರೆದು ಕಳುಹಿಸಿರುವುದು ''ತೈಲಾಗಾರ'' ಎಂದು, ಆದರೆ ಅವರು ಪ್ರಿಂಟ್ ಮಾಡಿರುವುದು 'ಶೈತ್ಯಾಗಾರ' ಎಂದು. ಅದಕ್ಕೂ, ಇದಕ್ಕೂ ಸಂಬಂಧ ಏನಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹುಶಃ ಇದು ತಪ್ಪಾಗಿ ಮುದ್ರಣವಾಗಿದೆ ಎಂದು ನನಗೆ ಅನ್ನಿಸುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು ಕೊಟ್ಟಿರತಕ್ಕ ಉತ್ತರ ತೈಲಾಗಾರಕ್ಕೂ ಅಥವಾ ಶೈತ್ಯಾಗಾರಕ್ಕೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ತಪ್ಪಾಗಿ ಮುದ್ರಣವಾಗಿದೆ. ಇದು ತೈಲಾಗಾರಕ್ಕೆ ಸಂಬಂಧಪಟ್ಟ ಪ್ರಶ್ನೆ. ಆದರೆ ಇಲ್ಲಿ ಕೋಲ್ಡ್ ಸ್ಟೋರೇಜ್ ಎನ್ನುವ ಅರ್ಥ ಬರುವಂತಿದೆ. ಆದ್ದರಿಂದ ''ಇಲ್ಲ'' ಎಂದು ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತೈಲಾಗಾರದವರಿಗೂ ಕೂಡ ಸರ್ಕಾರದಿಂದ ಜಾಗ ಕೊಡುತ್ತೇವೆ, ಅವರಿಗೆ ಬೇಕಾಗಿದ ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಡುತ್ತೇವೆ. ಹಣ ಕೊಡುತ್ತೇವೆಂದು ತಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೀರಾ ? ಒಂದು ವೇಳೆ ತಿಳಿಸಿದ್ದರೆ ಆ ವಿಷಯ ಎಲ್ಲಿಗೆ ಬಂದಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಮೊನ್ನೆತಾನೆ ಅಧಿಕಾರಿಗಳು ಚರ್ಚೆ ಮಾಡಿದ್ದಾರೆ. ಅಲ್ಲಿ ನಡೆದಂಥ ವಿಚಾರಗಳನ್ನು ನೋಡಿದರೆ ಆದಷ್ಟು ಬೇಗ ಈ ಬಗ್ಗೆ ಕೇಂದ್ರ ಸರ್ಕಾರದವರು ನಿರ್ಣಯ ತೆಗೆದುಕೊಳ್ಳುತ್ತಾರೆಂದು ತಿಳಿದುಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಇಷ್ಟು ಜಮೀನು ಕೊಡುತ್ತೇವೆ, ಇಷ್ಟು ವಿದ್ಯುಚ್ಛಕ್ತಿ ಕೊಡುತ್ತೇವೆ, ಅಥವಾ ಇಷ್ಟು ಬೇರೆಸಲಕರಣೆಗಳನ್ನು ಒದಗಿಸುತ್ತೇವೆಂದು ಮೊದಲೇ ಅವರಿಗೆ ತಿಳಿಸಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗೆ ಮಾಡಿದ್ದರೆ ಈ ಕೇಂದ್ರ ಸರ್ಕಾರದವರು ಕರ್ನಾಟಕ ರಾಜ್ಯಕ್ಕೆ ಎಷ್ಟು ಕೆಪ್ಯಾಸಿಟಿಯ ತೈಲಾಗಾರವನ್ನು ಮಾಡಬೇಕೆಂದು ಯೋಚನೆ ಮಾಡಿದ್ದಾರೆ ? ಅಥವಾ ನೀವೇ ಏನಾದರೂ ಇಷ್ಟು ಕೆಪ್ಯಾಸಿಟಿಯ ತೈಲಾಗಾರವನ್ನು ಮಾಡಿಕೊಡಬೇಕೆಂದು ಅವರಿಗೆ ಹೇಳಿದ್ದೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಫೀಸಿಬಿಲಿಟಿ ರಿಪೋರ್ಟ್‌ನ್ನು ಎಕ್ಸ್‌ಪರ್ಟ್ ಕಮಿಟಿಯವರು ಮಾಡಬೇಕಾಗಿರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಏತಕ್ಕೆ ಕೇಳುತ್ತಿದ್ದೇನೆಂದರೆ, ಪತ್ರಿಕೆಯಲ್ಲಿ ಬಂದಿರುವ ಪ್ರಕಾರ ನವಂಗೆ ಈ ತೈಲಾಗಾರ ಬರುವುದಿಲ್ಲ. ಹರಿಯಾಣಕ್ಕೆ ಹೋಗುತ್ತದೆ. ಒಂದುವೇಳೆ ಬಂದರೂ ಕೂಡ ನೀವು ಕೇಳಿರುವಷ್ಟು ಕೆಪ್ಯಾಸಿಟಿಯ ತೈಲಾಗಾರವನ್ನು ಅವರು ಕಟ್ಟಿಕೊಡುವುದಿಲ್ಲ. ನಮ್ಮ ಬಗ್ಗೆ ಕೇಂದ್ರ ಸರ್ಕಾರದವರಿಗೆ ಮಲತಾಯಿ ಧೋರಣೆ ಇರುವುದರಿಂದ ಈ ವಿಚಾರದಲ್ಲಿ ನಿಮ್ಮ ಧೋರಣೆ ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪತ್ರಿಕೆಯಲ್ಲಿ ಈರೀತಿ ಬಂದಿರುವುದು ನಿಜ. ಆದು ಗೊತ್ತಾದ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಮಂತ್ರಿಗಳ ಹತ್ತಿರ ಮಾತನಾಡಿದ್ದಾರೆ. ನಂತರ ಜನವರಿ ೨೭ ರಂದು ಅವರಿಗೆ ಒಂದು ವಿಪತ್ರವನ್ನೂ ಬರೆದಿದ್ದಾರೆ. ಇದು ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಅನುಕೂಲವಾಗಿರುವುದರಿಂದ ನವಂಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದೂ ಮತ್ತು ಕಾರಿಸೆಯಲ್ಲಿ ಕೇಂದ್ರ ಸರ್ಕಾರಕ್ಕೆ ಏನೇನು ಬೇಕೋ ಅದನ್ನೆಲ್ಲಾ ಒದಗಿಸಿಕೊಡುವುದಕ್ಕೆ ನಾವು ಸಿದ್ಧರಿದ್ದೇವೆಂದು ಪತ್ರ ಬರೆದಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಕೇಂದ್ರ ತೈಲಾಗಾರವನ್ನು ನೀವು ನಿರ್ಮಿಸುವುದಕ್ಕೆ ಸಂಬಂಧ ಪಟ್ಟಂತೆ ಕೇಂದ್ರ ಸರ್ಕಾರದವರು ಜನರಲ್ ಮ್ಯಾನೇಜರ್‌ರವರನ್ನು ನೇಮಕಮಾಡಿದ್ದಾರೆಯೆ ಹಾಗೆ ಮಾಡಿದ್ದರೆ ಅವರು ಎಷ್ಟು ದಿವಸದಿಂದ ಇಲ್ಲಿ ಕೆಲಸಮಾಡುತ್ತಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ನನ್ನ ಹತ್ತಿರ ಇಲ್ಲ. ಕೇಂದ್ರ ಸರ್ಕಾರದ ಅಧಿಕಾರಿಗಳು ನವೆಂಬರ್ ತಿಂಗಳಲ್ಲಿ ಚರ್ಚೆ ಮಾಡಿದ್ದಾರೆ. ಜಮೀನು ಕೊಡುವ ವಿಚಾರದಲ್ಲಿ ಮಂತ್ರಿತರ ವಿಚಾರದಲ್ಲಿ ನಾವು ಭರವಸೆಯನ್ನು ಕೊಟ್ಟಿದ್ದೇವೆ. ಇನ್ನೂ ಜನರಲ್ ಮ್ಯಾನೇಜರ್‌ರವರನ್ನು ನೇಮಕ ಮಾಡಿಲ್ಲ. ನನಗೆ ತಿಳಿದಿರುವಂತೆ ೬ ಲಕ್ಷ ಟನ್ ಕೆಪ್ಯಾಸಿಟಿಯ ತೈಲಾಗಾರವನ್ನು ನವಂಗೆ ಕೊಡುವ ನಿರೀಕ್ಷೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ವಿಜಯನಗರ ಉಕ್ಕು ಕಾರ್ಖಾನೆ ಮತ್ತು ಮಂಗಳೂರಿನ ತೈಲಾಗಾರ ಆಗದೇ ಹೋದರೆ ನಮ್ಮ ಕರ್ನಾಟಕದ ಜನತೆಗೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ತಾವು ಈ ಸದನದ ಸದಸ್ಯರಿಂದ ಕೂಡಿದ ಒಂದು ನಿಯೋಗವನ್ನು ದೆಹಲಿಗೆ ಕಳುಹಿಸಿಕೊಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆ ಸೂಕ್ತವಾಗಿದೆ. ನಮಗೂ ಅದೇ ಭಾವನೆ ಬರುತ್ತಿದೆ. ಇದು ಕರ್ನೂಲ್‌ಗೆ ಪ್ರಾಶಸ್ತ್ಯವನ್ನು ಕೊಟ್ಟು ಮಂಗಳೂರಿನ ತೈಲಾಗಾರವನ್ನು ಹಿಂದಕ್ಕೆ ಹಾಕತಕ್ಕ ಪ್ರಯತ್ನ ನಡೆದಿದೆ ಎನ್ನುವ ಭಾವನೆ ಪತ್ರಿಕೆಯಲ್ಲಿ ಬಂದಿದೆ. ಆದರೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಾಯ ತರತಕ್ಕ ವ್ಯವಸ್ಥೆ ಮಾಡುತ್ತದೆ ಮತ್ತು ಅವಶ್ಯ ಬಿದ್ದರೆ ಈ ಸದನದ ಸದಸ್ಯರನ್ನು ನಿಯೋಗ ಕಳುಹಿಸುವ ವ್ಯವಸ್ಥೆಯನ್ನೂ ಮಾಡುತ್ತೇವೆ.

ಶ್ರೀ ಪಂಪಾಪತಿ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ನಾನು ಆಗಲೇ ಕೇಳಿದಾಗ, ಇದಕ್ಕೆ ಸಂಬಂಧಪಟ್ಟಂತೆ ಎಂ. ಎಸ್. ಕೃಷ್ಣನ್‌ನವರು ಪ್ರಶ್ನೆ ಕೇಳಿದಾಗ ಉತ್ತರ ಕೊಡಂತ್ತೇನೆಂದು ತಾವು ಹೇಳಿದಿರಿ...

ಶ್ರೀ ಎಸ್. ಆರ್ ಬೊಮ್ಮಾಯಿ.—ನಾಳೆ ಉತ್ತರ ಬರಂತ್ತದೆ.

ಮಲಪ್ರಭಾ ಯೋಜನೆಯಲ್ಲಿ 1982–83ರ ಸಾಲಿಗೆ ಆಗಿರುವ ಸಿಮೆಂಟ್ ವಿತರಣೆ

೧೭. ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಲಪ್ರಭಾ ಯೋಜನೆಗೆ ಸರಕಾರದಿಂದ ಒಟ್ಟು ೮೨–೮೩ರಲ್ಲಿ ನಾಲ್ಕು ತಿಂಗಳಿಗೊಮ್ಮೆ ಎಷ್ಟು ಸಿಮೆಂಟ್ ವಿತರಣೆಯಾಗಿದೆ ?

ಆ) ಅದನ್ನು ಯಾವ ಯಾವ ಕೆಲಸಗಳಿಗೆ ಎಷ್ಟನ್ನು ಉಪಯೋಗಿಸಲಾಗಿದೆ ?

ಇ) ಇನ್ನುಳಿದ ಸಿಮೆಂಟನ್ನು ಕೆಲಸಕ್ಕೆ ಉಪಯೋಗಿಸದೆ ಇರುವುದಕ್ಕೆ ಕಾರಣಗಳೇನು ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ವಿತರಣೆ

೧೯೮೨–೮೩ರಲ್ಲಿ ಮೂರು ತಿಂಗಳಿಗೊಮ್ಮೆ ಆಗಿರುವ ಸಿಮೆಂಟಿನ ವಿತರಣೆ ಈ ರೀತಿ ಇದೆ.

೧.	೧೯೮೨ರ ಎರಡನೆಯ ಕ್ವಾರ್ಟರ್	...	೭೧೫೯ ಮೆಟ್ರಿಕ್ ಟನ್
೨.	೧೯೮೨ರ ಮೂರನೆಯ ಕ್ವಾರ್ಟರ್	...	೫೭೦೦ ,,
೩.	೧೯೮೨ರ ನಾಲ್ಕನೆಯ ಕ್ವಾರ್ಟರ್	...	೫೯೦೦ ,,
೪.	೧೯೮೩ರ ಮೊದಲನೆಯ ಕ್ವಾರ್ಟರ್	...	೪೫೦೦ ,,
ವಾಸ್ತವವಾಗಿ ದೊರೆತಿರುವುದು .		ಒಟ್ಟು	೨೩,೨೫೦ ಮೆಟ್ರಿಕ್‌ಟನ್
೧.	ಮೇಲಿನ ವಿತರಣೆಗೆ ಎದುರಾಗಿ ಫ್ಯಾಕ್ಟರಿಗಳಿಂದ ಬಂದಿರುವುದು.		೧೩೮೮೬.೬೦ ಮೆಂಟ್ರಿಕ್ ಟನ್
೨.	ಮೊದಲೇ ಇದ್ದದು		೧೩೮೬.೩೦ ,,
೩.	ಹಿಂದಿನ ವರ್ಷದ ಬಾಕಿ ಫ್ಯಾಕ್ಟರಿಗಳಿಂದ ಬಂದಿರುವುದು		೧೦೦೮೩.೭೦ ,,
೪.	ಘಟಪ್ರಭಾ ಯೋಜನೆಯ ಸಂಗ್ರಹಣದಿಂದ ಪಡೆದದ್ದು		೪೩.೫೦ ,,
		ಒಟ್ಟು	೨೫೪೦೧.೧೦ ಮೆಟ್ರಿಕ್ ಟನ್

ಆ) ಸ್ಪೇಟ್‌ಮೆಂಟ್‌ನಲ್ಲಿ ಲಗತ್ತಿಸಲಾಗಿದೆ.

ಇ) ಏನೂ ಸಿಮೆಂಟ್ ಉಳಿದಿಲ್ಲದಿರುವುದರಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.